ಕಾರ್ಯದ ಯಾವ ನಮೂನೆಯು ಕಡತದೊಳಗೆ ಇರಬೇಕು, ಇತರರೊಂದಿಗೆ ತಾವು ಏನನ್ನು ವಿನಿಮಯಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳೇ ತೀರ್ಮಾನಿಸಿ ತಮ್ಮ ಮಾಹಿತಿ ಖಾತೆಯನ್ನು ನಿರ್ವಹಿಸಬಹುದು. ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾಹಿತಿ ಖಾತೆಯ ಉದ್ದೇಶಗಳು ಮತ್ತು ಅದನ್ನು ನಿರ್ವಹಿಸಲು ಬೇಕಾದ ಮಾರ್ಗದರ್ಶನಗಳನ್ನು ನೀಡಿ ಕಾರ್ಯ ನಿರ್ವಹಿಸುವರು ಹಾಗೂ ಅನಂತರ ಅವರ ಕಾರ್ಯದ ಬಗ್ಗೆ ಹಿಮ್ಮಾಹಿತಿಯನ್ನು ನೀಡುವರು. ಇದರೊಂದಿಗೆ, ಶಿಕ್ಷಕರು ವಿದ್ಯಾರ್ಥಿಯ ಯಾವ ಕಾರ್ಯದ ನಮೂನೆಯು ಮಾಹಿತಿ ಖಾತೆಗೆ ಸೇರಬೇಕು ಎನ್ನುವುದನ್ನು ತೀರ್ಮಾನಿಸಲು ಸಹಾಯ ಮಾಡಿ ಅದನ್ನು ಜೋಡಿಸುವ ವಿಧಾನಕ್ಕೆ ಸಲಹೆಗಳನ್ನು ನೀಡುವರು.

**ಸಹಯೋಗದ ಅಭ್ಯಾಸದಲ್ಲಿ:**

ಅದೃಷ್ಟವಶಾತ್, (ಎನ್‌ಸಿಎಫ್ 2005 ಮತ್ತು ಸಿಸಿಇ ಅಗತ್ಯತೆಗಳಿಗೆ ಅನುಸಾರವಾಗಿ ಇರುವ ಮಾರ್ಗದರ್ಶಿಯ ಪರಿಣಾಮವಾಗಿರಬಹುದು) ಪ್ರಸ್ತುತ ದೇಶದಲ್ಲಿನ ಅನೇಕ ಶಾಲೆಗಳಲ್ಲಿ ಕಲಿಕಾನಿರ್ಧರಣೆಗಾಗಿ ಸಹಯೋಗಿ ವಿಧಾನವನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಮತ್ತು ಅವರ ಕಲಿಕಾನಿರ್ಧರಣೆಯ ಅಭ್ಯಾಸಗಳನ್ನು ಉತ್ತಮಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಒಂದು ಶಾಲೆಯಾದ ಹೆರಿಟೇಜ್ ಶಾಲೆಯಲ್ಲಿ (ಗುರುಗಾಂವ್‌ನಲ್ಲಿರುವ ಒಂದು ಅನುಭವಾಧಾರಿತ ಕಲಿಕಾ ಶಾಲೆ) ಕೆಲಸ ಮಾಡುವಾಗ, ಶಾಲೆಯಲ್ಲಿನ ಕಲಿಕಾನಿರ್ಧರಣೆಯ ಪ್ರಕ್ರಿಯೆಯಲ್ಲಿ ಮೇಲೆ ತಿಳಿಸಿರುವ ವಿದ್ಯಾರ್ಥಿಗಳೊಂದಿಗೆ ಬಳಸಬಹುದಾದ ಅನೇಕ ಕಾರ್ಯತಂತ್ರಗಳನ್ನು ನಿಜವಾಗಿ ಬಳಸುವ ಅವಕಾಶವು ನನಗೆ ಸಿಕ್ಕಿತ್ತು. ಶಾಲೆಯಲ್ಲಿರುವ ಬೋಧಕರು ಪಠ್ಯಕ್ರಮದ ಎಲ್ಲಾ ವಲಯಗಳಲ್ಲಿ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡಲು ವ್ಯವಸ್ಥಿತವಾದ ರೂಪಣ (formative) ಮತ್ತು ಸಮಗ್ರ (summative) ಕಲಿಕಾನಿರ್ಧರಣೆಗಳನ್ನು, ವಿದ್ಯಾರ್ಥಿಗಳನ್ನು, ಸಹಪಾಠಿಗಳನ್ನು ಮತ್ತು ಪೋಷಕರನ್ನು ಒಳಗೊಳ್ಳುವ ಕಾರ್ಯತಂತ್ರಗಳೊಂದಿಗೆ ಯೋಜನೆ ಮಾಡಿಕೊಳ್ಳಬೇಕಾಗಿತ್ತು. ಹೀಗಾಗಿ ಶಾಲೆಯಲ್ಲಿನ ವಿದ್ಯಾರ್ಥಿಗಳು ವಾಸ್ತವವಾಗಿ ತಮ್ಮ ಕಾರ್ಯದ ಬಗ್ಗೆ, ಸಾಮರ್ಥ್ಯ ಮತ್ತು ತಾವು ಬಲಪಡಿಸಿಕೊಳ್ಳ ಬೇಕಾದ ವಲಯಗಳ ಬಗ್ಗೆ ಮಾತನಾಡುವ ಮತ್ತು ತಮ್ಮ ಕಾರ್ಯವನ್ನು ವಿಮರ್ಶಿಸಿ ತಮ್ಮನ್ನು ತಾವೇ ಉತ್ತಮಪಡಿಸಿಕೊಳ್ಳಲು ಕೈಗೊಳ್ಳಬೇಕಾಗಿರುವ ಕಾರ್ಯವನ್ನು ವಿನಿಮಯ ಮಾಡಿಕೊಳ್ಳುವಂತಹ ಪರ್ಯಾಲೋಚಕರಾಗಿ ಬೆಳೆಯುತ್ತಿರುವುದನ್ನು ನಾನು ನೋಡಿದೆ!

ಭಾರತೀಯ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇಂತಹ ನವೀನ ಪ್ರಯತ್ನಗಳನ್ನು ಜಾರಿಗೆ ತರುವ ಸಾಧ್ಯತೆಗಳು ಅತ್ಯಂತ ಕಡಿಮೆ ಎನ್ನುವುದು ವಾಸ್ತವವಾದರೂ, ದೇಶದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಗುಂಪಿನ ಜನರು ತೆಗೆದು ಕೊಂಡ ಚಿಕ್ಕಚಿಕ್ಕ ಹೆಜ್ಜೆಗಳೇ ಕಾಲಕ್ರಮದಲ್ಲಿ ಇಡೀ ವ್ಯವಸ್ಥೆಯನ್ನು ಪ್ರಭಾವಿಸಲು ಬಹಳ ಸಹಾಯಮಾಡುತ್ತವೆ. ಕಲಿಕಾನಿರ್ಧರಣೆಯಲ್ಲಿ ಮತ್ತು ಒಟ್ಟಾರೆ ಕಲಿಕೆಯಲ್ಲಿ ಸಹಯೋಗಿಯ ಶಕ್ತಿಯನ್ನು ವ್ಯಾಪಕವಾದ ರೀತಿಯಲ್ಲಿ ಗುರುತಿಸುವಂತಾಗಲಿ ಮತ್ತು ಬಳಸಿಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ.



*__ಪ್ರೇರಣಾ ಶಿವಪುರಿ:__ ಅಜೀಂ ಪ್ರೇಂಜಿ ಪ್ರತಿಷ್ಠಾನದ ಶಿಕ್ಷಕ ಶಿಕ್ಷಣ ತಂಡದಲ್ಲಿ ಕೆಲಸ ಮಾಡುತ್ತಿರುವ ಪ್ರೇರಣಾ, ಗುರ್ಗಾಂವ್‌ನ ಶಿಕ್ಷಾಂತರ್ ಮತ್ತು ದಿ ಹೆರಿಟೇಜ್ ಸ್ಕೂಲ್ ನಲ್ಲಿ ದುಡಿದವರು. ಕಳೆದ 12 ವರ್ಷಗಳಿಂದ ಪ್ರಾಥಮಿಕ ಮತ್ತು ಪ್ರಾಥಮಿಕ ಪೂರ್ವ ಶಿಕ್ಷಣದಲ್ಲಿ ಮತ್ತು ಶಿಕ್ಷಕ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ತಮ್ಮ ಹಿಂದಿನ ಸಂಸ್ಥೆಯಲ್ಲಿ ಅವರು ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳಲ್ಲಿ ಕಲಿಕಾನಿರ್ಧರಣೆ ಸಾಧನಗಳನ್ನು ವ್ಯಾಪಕವಾಗಿ ವಿನ್ಯಾಸಗೊಳಿಸಿದ್ದಾರೆ ಮತ್ತು ಬಳಸಿದ್ದಾರೆ ಇವರನ್ನು prerna.shivpuri@azimpremjifoundation.org ನಲ್ಲಿ ಸಂಪರ್ಕಿಸಬಹುದು.*

# ಶಾಲೆಗಳಲ್ಲಿ ಕಲಿಕಾ ನಿರ್ಧರಣೆ : ಮಗುವಿಗೇನು ಲಾಭ?

ಅನಾನಾಸ್ ಕುಮಾರ್



2009-2010 ರ ಅವಧಿಯಿಂದ ಗ್ರೇಡಿಂಗ್ ಪದ್ಧತಿಯನ್ನು ಜಾರಿಗೆ ತಂದು ಭಾರತೀಯ ಶಿಕ್ಷಣ ವ್ಯವಸ್ಥೆ ನಮ್ಮ ಶಿಕ್ಷಣ ಪದ್ಧತಿಯನ್ನು ಸುಧಾರಿಸುವತ್ತ ದಾಪುಗಾಲಿರಿಸಿದೆ. ಈ ಪದ್ಧತಿಯು ಪರೀಕ್ಷೆ ಕಾಲದಲ್ಲಿ ಮಕ್ಕಳ ಮೇಲಿನ ಒತ್ತಡವನ್ನು ಇಳಿಸಲು ಸಹಾಯ ಮಾಡಲಿದೆ. ಕಳೆದ ಐದು ವರ್ಷಗಳಲ್ಲಿ ಶಿಕ್ಷಣವೆಂದರೆ, ಜ್ಞಾನಾರ್ಜನೆಯ ಬದಲು ಅಂಕ ಗಳಿಸುವುದೆಂಬ ಸ್ಥಿತಿಗೆ ಮಕ್ಕಳು ಬಂದಿದ್ದಾರೆ. ತನ್ಮೂಲಕ ಇದು ಅನೇಕ ಶೈಕ್ಷಣಿಕ ನೀತಿಗಳಿಗೆ ಎಡೆ ಮಾಡಿಕೊಟ್ಟಿದೆ.

ಪರೀಕ್ಷೆಗಳಲ್ಲಿ ಅಥವಾ ಪ್ರವೇಶ ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆಯಲಾಗಲಿಲ್ಲ ಎಂಬ ಕಾರಣಕ್ಕೇ 15-25ರ ವಯೋಮಾನದ ವಿದ್ಯಾರ್ಥಿಗಳಲ್ಲಿ ದಿನವಹಿ 17ಕ್ಕೂ ಹೆಚ್ಚು ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಕಳವಳಕಾರೀ ವರದಿಗಳು ನಮ್ಮ ಮುಂದಿವೆ. ಅಧಿಕ ಅಂಕಗಳನ್ನು ತೆಗೆಯಬೇಕೆಂಬ ಒತ್ತಡಕ್ಕೆ ನಮ್ಮ ಮಕ್ಕಳು ಬಲಿಯಾಗುತ್ತಿರುವುದು ಶೋಚನೀಯ. ಇಲ್ಲಿ ನಮ್ಮ ಸಮಾಜದ ಯೋಚನಾ ಲಹರಿ ಬಗ್ಗೆ ನಾವು ಗಮನಿಸಬೇಕು. ಸಾಧಿಸಬೇಕೆಂಬ ಒತ್ತಡವನ್ನು ಈ ಸಮಾಜ ಮಕ್ಕಳ ಮೇಲೆ ತೀವ್ರವಾಗಿ ಹೇರುತ್ತಿದೆ.

ಶಾಲೆ, ಹೆತ್ತವರು, ಸಹಪಾಠಿಗಳು, ಸಮಾಜ,–ಹೀಗೆ ಎಲ್ಲರ ಒತ್ತಡವೂ ಈ ದಿಕ್ಕಿನಲ್ಲಿದ್ದು, ಇದು ಮಗುವಿನ ಸಹಜ ಉತ್ಸಾಹವನ್ನು ನಿರ್ನಾಮ ಮಾಡುತ್ತಿದೆ. ಇದು ಮೈ ಕೈನೋವು, ಸುಸ್ತು, ಕಣ್ಣಿನ ಸಮಸ್ಯೆ, ಮಾನಸಿಕ ಒತ್ತಡ ಇನ್ನೂ ಅತಿಯಾದ ಪ್ರಕರಣಗಳಲ್ಲಿ ಖಿನ್ನತೆಯಂತಹ ಮನೋವೈಜ್ಞಾನಿಕ ಸಮಸ್ಯೆಗಳನ್ನೂ ಉಂಟುಮಾಡುತ್ತದೆ ಎಂಬ ವರದಿಗಳೂ ಈ ಸಮಸ್ಯೆಯ ತೀವ್ರತೆಯನ್ನು ಒತ್ತಿ ಹೇಳುತ್ತಿವೆ.

ಇದನ್ನೆಲ್ಲಾ ಗಮನಿಸಿಯೇ, ಕೇಂದ್ರ ಸೆಕೆಂಡರಿ ಶಿಕ್ಷಣ ಮಂಡಳಿಯು, ಶಾಲೆಗಳಲ್ಲಿ ಮಕ್ಕಳ ಆತ್ಮವಿಶ್ವಾಸವನ್ನು ಪ್ರಚೋದಿಸಲು ಮತ್ತು ಮಂಡಳಿ ಪರೀಕ್ಷೆಗೆ ಅವರನ್ನು ಮಾನಸಿಕವಾಗಿ ಸಿದ್ಧಪಡಿಸಲು ಮನಶ್ಶಾಸ್ತ್ರಜ್ಞರು ಮತ್ತು ಆಪ್ತ ಸಲಹೆಗಾರರನ್ನು ನೇಮಿಸಬೇಕೆಂದು ಹೇಳಿದೆ. ಇವರ ಉಪಸ್ಥಿತಿ, ಮಕ್ಕಳ ಪರೀಕ್ಷಾ ಭಯವನ್ನು ನಿವಾರಿಸಿದೆ ಮತ್ತು ಒತ್ತಡವನ್ನು ಕಡಿಮೆ ಮಾಡಿದೆ.

ಈ ಬೋರ್ಡ್ ಪರೀಕ್ಷೆ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳೊಂದಿಗೆ ಅದರ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಇಂದು ಬಲುಮುಖ್ಯ. ಶಾಲೆ, ಹೆತ್ತವರು, ಸಮಾಜದ ನಿರೀಕ್ಷೆ, ಜೊತೆಗೆ ತನ್ನ ಪ್ರತಿಭೆಯ ಬಗ್ಗೆ ತನಗೇ ಇರುವ ಅರಿವು ಇವುಗಳನ್ನೆಲ್ಲಾ ವಿದ್ಯಾರ್ಥಿಯೊಬ್ಬ ನಿಭಾಯಿಸಲು ಬಹಳ ಕಷ್ಟಪಡಬೇಕಿದೆ. ಆದ್ದರಿಂದಲೇ ಗ್ರೇಡಿಂಗ್ ಪದ್ಧತಿಯ ಜಾರಿ ಮತ್ತು ಮಂಡಳಿ ಪದ್ಧತಿಯು ರದ್ಧತಿ ಮಕ್ಕಳಿಗೆ ವರದಾನವಾಗಿದೆ. ಗ್ರೇಡಿಂಗ್ ಪದ್ಧತಿಯು 2008-09ರಲ್ಲಿ 1 ರಿಂದ 8ನೇ ತರಗತಿ ವರೆಗೆ ಜಾರಿಗೆ ಬಂದು ಮಕ್ಕಳ ಒತ್ತಡ ಕಡಿಮೆಯಾಯಿತು. ಮುಂದೆ ಒಂಬತ್ತು ಮತ್ತು ಹತ್ತನೇ ತರಗತಿಗೂ ಇದನ್ನು ವಿಸ್ತರಿಸಿದ್ದರಿಂದಾಗಿ ಮಕ್ಕಳ ಒತ್ತಡ ಇನ್ನಷ್ಟು ಕಡಿಮೆಯಾಯಿತು. ಇದರಿಂದ ಮಕ್ಕಳು ಇತರ ಮಾರ್ಗ ಅನ್ವೇಷಣೆ ಮಾಡಲು ಅವಕಾಶ ದೊರೆಯಿತು. ಅಮೆರಿಕನ್ ಪದ್ಧತಿಯನ್ನು ಅನುಸರಿಸಿ ಗ್ರೇಡಿಂಗ್ ವ್ಯವಸೆಯನ್ನು ಜಾರಿಗೆ ತಂದಿರುವುದರಿಂದ ಹಿಂದಿನ ಸಿದ್ಧಾಂತ ಬೋಧನೆಗಿಂತ ಮಕ್ಕಳು ಹೆಚ್ಚು ಹೆಚ್ಚು ಪ್ರಾಯೋಗಿಕ ಶಿಕ್ಷಣವನ್ನು ಕಲಿಯುವುದು ಸಾಧ್ಯವಾಗಿದೆ. ಈ ಪದ್ಧತಿ ಎಲ್ಲಾ ಮಟ್ಟದ ಮಕ್ಕಳಿಗೂ ಅನೇಕ ಬಗೆಯ ಅವಕಾಶಗಳನ್ನು ನಿಗದಿಪಡಿಸಿ ತಮ್ಮ ಪ್ರತಿಭೆಗನುಗುಣವಾಗಿ ತಂತಮ್ಮ ಸಾಧನೆಯನ್ನು ಪ್ರಸ್ತುತಪಡಿಸಲು ಮತ್ತು ಆಸಕ್ತಿಗಳನ್ನು ಸಾಂಪ್ರದಾಯಿಕವಾಗಿ ಮುಂದುವರಿಸಿಕೊಂಡು ಹೋಗಲು ಒಂದು ವೇದಿಕೆಯನ್ನು ಸೃಷ್ಟಿಸಿದೆ.

ಹತ್ತನೇ ತರಗತಿಯಲ್ಲಿ ಗಳಿಸಿದ ಅಂಕಗಳಿಗೆ ಅನುಗುಣವಾಗಿ ಮುಂದಿನ ತರಗತಿಗಳ ಐಚ್ಛಿಕಗಳನ್ನು ನಿರ್ಧರಿಸಿ ನೀಡುವ ಪದ್ಧತಿಯೂ ನಮ್ಮಲ್ಲಿದೆ. ಇದು ಮಕ್ಕಳು ಕಡಿಮೆ ಅಂಕ ಪಡೆದಿದ್ದರೆ ಮಕ್ಕಳಲ್ಲಿ ತೀವ್ರ ಹತಾಶೆ ಸೃಷ್ಟಿಸುತ್ತಿತ್ತು; ಅಷ್ಟೇ ಅಲ್ಲ ಒಂದು ವಿಷಯದಲ್ಲಿ ಅಂಕ ಕಡಿಮೆಯಾದರೆ ಅದು ಒಟ್ಟು ಶೇಕಡಾವಾರು ಅಂಕಗಳ ಮೇಲೆ ಪರಿಣಾಮ ಬೀರುತ್ತಿತ್ತು. ಗ್ರೇಡಿಂಗ್ ಪದ್ಧತಿ ಈ ವಿಚಾರದಲ್ಲಿ ಮಕ್ಕಳಿಗೆ ನೆಮ್ಮದಿ ನೀಡಿದೆ ಮತ್ತು ಅದು ಅವರು ತಮ್ಮ ಆಯ್ಕೆಯ ವಿಷಯಗಳಲ್ಲಿ ಉತ್ಕೃಷ್ಟತೆ ಸಾಧಿಸಲು ಸಾಕಷ್ಟು ಅವಕಾಶ ಒದಗಿಸುತ್ತದೆ.

ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳು ಪ್ರಶ್ನಿಸುತ್ತಾರಾದರೂ ಇದು ಕಲಿಕೆಯಲ್ಲಿ ಸರಿಸುಮಾರಾದ ವಿದ್ಯಾರ್ಥಿಯು ಒತ್ತಡದಿಂದ ಮುಕ್ತನಾಗಲು ಸಹಾಯ ಮಾಡುತ್ತದೆ. ಈ ಪದ್ಧತಿಯಲ್ಲಿ ಮಕ್ಕಳನ್ನು ೯ ಸ್ತರದ ಗ್ರೇಡಿಂಗ್ ಅಂಕಗಳ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ. ಇದರಿಂದಾಗಿ, ಉದಾ: ೯೯% ಅಂಕ ಬಂದ ವಿದ್ಯಾರ್ಥಿಯೂ 91% ಅಂಕ ಬಂದ ವಿದ್ಯಾರ್ಥಿಯೂ o+ ಗ್ರೇಡ್ ಪಡೆಯುವ ಕಾರಣ ವ್ಯತ್ಯಾಸ ಹೆಚ್ಚಾಗಿ ಕಾಣುವುದಿಲ್ಲ. ಈ ಪದ್ಧತಿಯು ಯಶಸ್ವಿಯಾಗಲು, ಹೆತ್ತವರು ಮತ್ತು ಶಿಕ್ಷಕರು ಮಗುವಿನ ವಿಶಿಷ್ಟ ಪ್ರತಿಭೆಯನ್ನು ಗುರುತಿಸಬೇಕು ಮತ್ತು ಅವರು ತಮ್ಮ ಆಸಕ್ತಿಯ ಚಟುವಟಿಕೆಯಲ್ಲಿ ತೊಡಗಲು ಉತ್ತೇಜಿಸಬೇಕು. ಗ್ರೇಡಿಂಗ್ ಪದ್ಧತಿಯ ಪರವಾಗಿರುವ ಬಲವಾದ ವಾದವೆಂದರೆ, ಇದು ವಿದ್ಯಾರ್ಥಿಯ ಸಾಧನೆಯ ಪರಿಮಾಣಾತ್ಮಕ ಮೌಲ್ಯಮಾಪನವನ್ನು ಮಾಡದೇ ಗುಣಾತ್ಮಕ ಮೌಲ್ಯಮಾಪನ ಮಾಡುತ್ತದೆ. ವ್ಯಕ್ತಿಯ ವ್ಯಕ್ತಿತ್ವದ ಶಕ್ತಿಯನ್ನು ಆತನ ಕೃತಿಯ ಗುಣಮಟ್ಟವನ್ನು ಆಧರಿಸಿ ಗ್ರೇಡು ನೀಡಲಾಗುತ್ತದೆ. ಕಲಿಯುವ ವಿದ್ಯಾರ್ಥಿಯಲ್ಲಿ ನಾವು ಬಯಸುವ ಗುಣಗಳನ್ನು ಆಧರಿಸಿ ಅದರಲ್ಲಿ ಬದಲಾವಣೆಯನ್ನು ಪ್ರೇರೇಪಿಸಬೇಕು. ಈ ವರ್ತನೆಯನ್ನು ಪರಿಗಣಿಸಿ ಗ್ರೇಡುಗಳನ್ನು ನೀಡುವುದು ಗುಣಮಟ್ಟವನ್ನು ನಿರ್ಧರಿಸಲು ಉತ್ತಮ ಗಣನಾಂಶಗಳಾಗುತ್ತವೆ.

ಗ್ರೇಡಿಂಗ್ ಪದ್ಧತಿಯಲ್ಲಿ ವಿದ್ಯಾರ್ಥಿಯ ಸಾಧನೆಯ ಗುಣಮಟ್ಟಕ್ಕೆ ಅನುಗುಣವಾಗಿ ಅಂಕಗಳ ಬದಲಾಗಿ ಗ್ರೇಡುಗಳನ್ನು ನೀಡಲಾಗುತ್ತದೆ. ಬೇರೆ ಬೇರೆ ಸಾಧನಾ ಮಟ್ಟಕ್ಕೆ ಪೂರ್ವ ನಿರ್ಧರಿತ ಗ್ರೇಡ್ ಗಳನ್ನು ನಿಗದಿಪಡಿಸಲಾಗುತ್ತದೆ. ಉದಾ:

| ಗುಣಮಟ್ಟ | ಗ್ರೇಡ್ |
|---|---|
| ಅಪ್ರತಿಮ | O |
| ಅತ್ಯುತ್ತಮ | A |
| ಉತ್ತಮ | B |
| ತೃಪ್ತಿಕರ | C |
| ಸಾಧಾರಣ | D |
| ಕಳಪೆ | E |
| ತೀರಾ ಕಳಪೆ | F |

ಪ್ರಶ್ನೆಯ ಗುಣಮಟ್ಟವನ್ನು ಪರಿಗಣಿಸಿ ಮೌಲ್ಯಮಾಪಕನೊಬ್ಬ ವಿದ್ಯಾರ್ಥಿಗಳ ಸಾಧನೆಯನ್ನು ಈ ಮೂಲಕ ಸರಿಯಾಗಿ ಅಳೆಯಬಹುದು.

**ಗ್ರೇಡಿಂಗ್ ವಿಧಾನಗಳು**

ಮೂಲತಃ ಎರಡು ರೀತಿಯ ಗ್ರೇಡಿಂಗ್ ವಿಧಾನಗಳಿವೆ:

*1. ನೇರ ಗ್ರೇಡಿಂಗ್:* ಪ್ರಶ್ನೆಗಳಿಗೆ ಉತ್ತರಿಸಿದ ಗುಣಮಟ್ಟಕ್ಕೆ ಅನುಗುಣವಾಗಿ ಗ್ರೇಡ್ ನೀಡುತ್ತಾ ಹೋಗುವ ವಿಧಾನ ಇದು. ಉತ್ತರ ಅತ್ಯುತ್ತಮವಾಗಿದ್ದರೆ ಇನ್ಯಾವ ಉತ್ತರವೂ ಅದಕ್ಕೆ ಸರಿಸಾಟಿಯಾಗಿ ಇರದಿದ್ದರೆ 'O'. ತೀರಾ ಕಳಪೆಯಾಗಿದ್ದರೆ 'F' ಹೀಗೆ. ಅಂದರೆ ಇದು ಏಳು ಸ್ತರದ ಗ್ರೇಡಿಂಗ್ ಪದ್ಧತಿ. ಒಂದು ವಿಷಯದಲ್ಲಿ ಹಲವಾರು ಪ್ರಶ್ನೆಗಳಿದ್ದರೆ, ಒಂದೊಂದು ಪ್ರಶ್ನೆಗೂ ವಿದ್ಯಾರ್ಥಿ ಪಡೆದ ಗ್ರೇಡುಗಳನ್ನು ಸೇರಿಸಿ ಈ ಕೆಳಗಿನ ಸೂತ್ರವನ್ನು ಬಳಸಿ ಸರಾಸರಿ ತೆಗೆಯುವ ಮೂಲಕ ಒಟ್ಟಾರೆ ಗ್ರೇಡನ್ನು ನಿರ್ಧರಿಸಬಹುದು.

***ಒಟ್ಟಾರೆ ಗ್ರೇಡು=ಗ್ರೇಡುಗಳ ಮೊತ್ತ/ಪ್ರಶ್ನೆಗಳ ಸಂಖ್ಯೆ***

ಇದಕ್ಕೆ ಒಂದು ಉದಾಹರಣೆ ನೋಡೋಣ: ಮುಂದೆಹೇಳಿದ ರೀತಿಯಲ್ಲಿ ಏಳು ಅಂಶಗಳ ಅಳತೆಯಲ್ಲಿ ಏಳು ಪ್ರಶ್ನೆಗಳನ್ನು ಪರೀಕ್ಷಾಕಾರರು ಗ್ರೇಡು ಮಾಡುತ್ತಾರೆ. ಪರಿಕ್ಷಾರ್ಥಿಯ ಒಟ್ಟಾರೆ ಗ್ರೇಡನ್ನು ಕಂಡುಹಿಡಿಯಿರಿ.

ಒಂದರಿಂದ ಏಳರ ವರೆಗೆ ನೀಡಲಾದ ಗ್ರೇಡುಗಳು = A, C, C, D, O, F, C

ಉತ್ತರ :

*ಹಂತ 1:* ಒಂದರಿಂದ ಏಳರ ವರೆಗೆ ಒಂದೊಂದು ಗ್ರೇಡಿಗೂ ನಿರ್ದಿಷ್ಟ ಅಂಕವನ್ನು ಈ ರೀತಿ ನೀಡಲಾಗಿದೆ:

| ಗ್ರೇಡ್ | O | A | B | C | D | E | F |
|---|---|---|---|---|---|---|---|
| ಅಂಕ | 7 | 6 | 5 | 4 | 3 | 2 | 1 |

**ಉತ್ಕೃಷ್ಟತೆ**

***ಹಂತ 2:*** ವಿದ್ಯಾರ್ಥಿ ಪಡೆದ ಗ್ರೇಡ್‌ಗೆ ಅಂಕನೀಡುತ್ತಾ ಹೋಗೋಣ

| ಗಳಿಸಿದ ಗ್ರೇಡ್ | A | C | C | D | O | F | C |
|---|---|---|---|---|---|---|---|
| ಅಂಕ | 6 | 4 | 4 | 3 | 7 | 1 | 4 |

***ಹಂತ 3:*** ಈ ಅಂಕಗಳನ್ನು ಕೂಡಿಸಿ ಒಟ್ಟು ಪ್ರಶ್ನೆಗಳ ಸಂಖ್ಯೆಯಿಂದ ಭಾಗಿಸಿದರಾಯಿತು

*ಸರಾಸರಿ ಗ್ರೇಡ್* = 6 + 4 + 4 + 3 + 7 + 1 + 4 = 29 / 7 = 4.14 = C

ಲೆಕ್ಕ ಹಾಕಲು ಇದು ಸುಲಭವಾದರೂ ಇದಕ್ಕೂ ಕೆಲವು ಮಿತಿಗಳಿವೆ.

ಉತ್ತರದ ಗುಣಮಟ್ಟ ನಿಶ್ಚಯಿಸುವುದು ವ್ಯಕ್ತಿನಿಷ್ಠ ಪ್ರಕ್ರಿಯೆ. ಆದ್ದರಿಂದ ಇದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಬೇರೆ ಬೇರೆ ಮೌಲ್ಯಮಾಪಕರು ಒಬ್ಬನೇ ವಿದ್ಯಾರ್ಥಿಗೆ ಬೇರೆ ಬೇರೆ ಗ್ರೇಡ್ ಕೊಡುವ ಸಾಧ್ಯತೆ ಇದೆ. ಜೊತೆಗೆ, ಮಾನದಂಡಗಳೂ ಕಾಲಕಾಲಕ್ಕೆ ಬದಲಾಗುವ ಸಾಧ್ಯತೆ ಇದ್ದು ಒಬ್ಬನೇ ಪರೀಕ್ಷಾಕಾರನು ಅದೇ ರೀತಿಯಲ್ಲಿ ಮೌಲ್ಯಮಾಪನ ಮಾಡಲಾಗುವುದಿಲ್ಲ.

ಇನ್ನೊಂದು ಅಂಶವೆಂದರೆ ಒಂದಷ್ಟು ಉತ್ತರಪತ್ರಿಕೆಗಳನ್ನು ತೌಲನಿಕವಾಗಿ ನೋಡದೇ ಮೌಲ್ಯಮಾಪನ ಮಾಡುವುದೂ ಕಷ್ಟವೇ. ಇದಕ್ಕೆ ಒಂದಿಷ್ಟು ಹೆಚ್ಚುವರಿ ಸಮಯ ಬೇಕು.

ಆ ಗುಂಪಿನಲ್ಲಿರುವ ಎಲ್ಲಾ ಪರೀಕ್ಷಾರ್ಥಿಗಳ ಗುಣಮಟ್ಟ ಕಡಿಮೆಯಿದ್ದರೂ ಗ್ರೇಡಿಂಗ್‌ನಲ್ಲಿ ತಪ್ಪುಗಳಾಗುವ ಸಂಭವ ಉಂಟು.

***2. ಅಂಕಗಳನ್ನು ಗ್ರೇಡುಗಳಾಗಿ ಪರಿವರ್ತಿಸುವ ವಿಧಾನ:*** ಗ್ರೇಡಿಂಗ್ ಮತ್ತು ಅಂಕ ವಿಧಾನಗಳೆರಡರ ಉತ್ತಮ ಅಂಶಗಳನ್ನು ಬೆಸೆಯುವ ವಿಧಾನ ಇದು. ಎರಡೂ ವಿಧಾನಗಳ ಕೆಲವು ದೋಷಗಳನ್ನು ಇದು ತಕ್ಕ ಮಟ್ಟಿಗೆ ನಿವಾರಿಸಬಲ್ಲದು.

ವಿದ್ಯಾರ್ಥಿಗಳನ್ನು ಇದು ಕಡಿಮೆ ಗುಂಪುಗಳಾಗಿ ವಿಂಗಡಿಸುತ್ತದೆ ಮತ್ತು ಗೊಂದಲವೂ ಕಡಿಮೆ.

ಗುಣಾತ್ಮಕ ಕಲಿಕಾ ನಿರ್ಧಾರಣೆಯನ್ನು ಇದು ಸಾಧ್ಯಗೊಳಿಸುತ್ತದೆ.

ಈ ವಿಧಾನದಲ್ಲಿ ವಿದ್ಯಾರ್ಥಿಯ ಉತ್ತರ ಪತ್ರಿಕೆಯನ್ನು ಮಾಮೂಲಿ ವಿಧಾನದಲ್ಲಿ ಮೌಲ್ಯಮಾಪನ ಮಾಡಿ ಅಂಕ ನೀಡಲಾಗುತ್ತದೆ. ಆಮೇಲೆ, ಈ ಕೆಳಕಂಡ ಮಾನದಂಡಗಳನ್ವಯ ಗ್ರೇಡುಗಳಾಗಿ ಪರಿವರ್ತಿಸಲಾಗುತ್ತದೆ.

**ಮಾನದಂಡ 1:** ಅಂಕಗಳನ್ನು ನಿರ್ದಿಷ್ಟ ಸ್ತರಪಟ್ಟಿ ಮಾಡಿ ಅದನ್ನು 7 ಸ್ತರಗಳ ಗ್ರೇಡಿಂಗ್ ಮಾಪನಕ್ಕೆ ಪರಿವರ್ತಿಸುವುದು.

| ಗ್ರೇಡ್ | ಅಂಕ ಪಟ್ಟಿ |
|---|---|
| O | 91%ಕ್ಕಿಂತ ಹೆಚ್ಚು |
| A | 81%–91% |
| B | 61%–80% |
| C | 51%–60% |
| D | 41%_50% |
| E | 33%=40% |
| F | 33%ಕ್ಕಿಂತ ಕಡಿಮೆ |

**ಮಾನದಂಡ 2:** ಕೇಂದ್ರ ಮಂಡಳಿಯ ಮಾದರಿಯಲ್ಲಿ ಓದುವ ಮಕ್ಕಳ ಮೌಲ್ಯಮಾಪನ ಮಾಡಿ ಅಂಕ ಪಟ್ಟಿಯನ್ನು ಸಾಂಪ್ರದಾಯಿಕವಾಗಿ ತಯಾರಿಸುವುದು. ಅದರಲ್ಲಿ 33%ಕ್ಕಿಂತ ಕಡಿಮೆ ಯಾವುದೇ ವಿಷಯದಲ್ಲಿ ಬಂದರೂ ಆ ವಿದ್ಯಾರ್ಥಿಯನ್ನು ಅನುತ್ತೀರ್ಣ ಎಂದು ಪರಿಗಣಿಸಿ ಇ ಗ್ರೇಡ್ ನೀಡಲಾಗುವುದು. ಉಳಿದ ಮಕ್ಕಳನ್ನು ಎಂಟು ಭಾಗಗಳಾಗಿ ವಿಭಜಿಸಿ. 12.5%ರಂತೆ ಅಂಕ ಪಟ್ಟಿಗನುಗುಣವಾದ ಸಾಧನಾ ಶ್ರೇಣಿಯನ್ನು ತಯಾರು ಮಾಡಿ ಅದರಂತೆ ಗ್ರೇಡ್ ಮಾಡುವುದು. ಈ ಪ್ರಕಾರವಾಗಿ ಅತ್ಯುತ್ತಮ ಶ್ರೇಣಿಯ 12.5% ಮಕ್ಕಳು 01 ಗ್ರೇಡ್ ಪಡೆಯುತ್ತಾರೆ, ತದನಂತರದ 12.5% ಶ್ರೇಣಿಯ ಮಕ್ಕಳು 02 ಪಡೆಯುತ್ತಾರೆ, ಇದೇ ರೀತಿ B1, B2, C1, C2, D1, D2 ಹಾಗೂ ಇ ಶ್ರೇಣಿ ಪಡೆಯುತ್ತಾರೆ. ಈ ಪ್ರಕಾರ ೯ ಶ್ರೇಣಿಗಳ ಗ್ರೇಡ್ ಮಾಡಬಹುದು.

ಈ ಪದ್ಧತಿ ಉಳಿದವಕ್ಕಿಂತ ಸುಲಭವೆನಿಸಿದರೂ ಇದರಲ್ಲೂ ಕೆಲವು ಇತಿಮಿತಿಗಳಿವೆ. ಪರೀಕ್ಷೆ ಪಾಸು ಮಾಡುವುದೇ ಗುರಿಯಾಗಿರುವ ಧಾವಂತ ಇರುವ ಪರೀಕ್ಷಾ ವ್ಯವಸ್ಥೆಯಲ್ಲಿ ಇದು ಕಷ್ಟ. ವಾರ್ಷಿಕ ಪರೀಕ್ಷಾ ಪದ್ಧತಿಯ ಎಲ್ಲಾ ದೋಷಗಳೂ ಈ ಮಾದರಿಯಲ್ಲಿ ಹೆಡೆ ಎತ್ತುತ್ತವೆ. ಪರೀಕ್ಷೆ ಹತ್ತಿರ ಬಂದಾಗ ವಿದ್ಯಾರ್ಥಿಗಳು ಓದಲು ಪ್ರಾರಂಭಿಸುತ್ತಾರೆ. ಪರೀಕ್ಷೆ ತರುವಾಯ ಫಲಿತಾಂಶ ಗಮನಿಸಿಯೇ ಮಕ್ಕಳು ಮುಂದಿನ ಅಧ್ಯಯನದ ಬಗ್ಗೆ ಯೋಚಿಸುವ ಸಾಧ್ಯತೆ ಇದೆ.

ಹೀಗಾಗಿ ಗ್ರೇಡಿಂಗ್ ಪದ್ಧತಿಯೇನೋ ಉತ್ತಮ ಆದರೆ ಅದರಲ್ಲೂ ಸಮಸ್ಯೆಗಳಿವೆ ಎಂದು ಹೇಳಬಹುದು. ಅದನ್ನು ಹೇಗೆ ಪರಿಹರಿಸಬಹುದು?

**ಗ್ರೇಡಿಂಗ್ ಪದ್ಧತಿ ಬಗ್ಗೆ ಕೆಲವು ಶಿಕ್ಷಕರ ಅಭಿಪ್ರಾಯಗಳು:**

**ತಾನಕ್ ಸಿಂಗ್ ಬಿಷ್ಟ್** (CRCCC, ದುಂಡಗಾಂವ್, ಉತ್ತರಕಾಶಿ, ಉತ್ತರಾಖಂಡ್): ವಿದ್ಯಾಥಿಗಳನ್ನು ಸೀಮಿತ ಗುಂಪುಗಳಾಗಿ ವಿಭಜಿಸುವ ಕಾರಣ ಒಬ್ಬರಿಗಿಂತ ಇನ್ನೊಬ್ಬರು ಹೆಚ್ಚು ಅಂಕ ಗಳಸಬೇಕೆಂಬ ಅಂಕದ ಧಾವಂತದ ಸ್ಪರ್ಧೆ ಮಕ್ಕಳಲ್ಲಿ ಕಡಿಮೆಯಾಗುತ್ತದೆ ಇದರಿಂದ ಮಕ್ಕಳಲ್ಲಿ ಒತ್ತಡ ಕಡಿಮೆಯಾಗುತ್ತದೆ.

**ಸೋನಿಯಾ ಸೈನಿ** (ಉಪಶಿಕ್ಷಕಿ, GGIC, ಉತ್ತರ ಕಾಶಿ): ಅತಿ ಜಾಣ ಮಕ್ಕಳಿಗಿಂತ ಇದು ಕಡಿಮೆ ಕಲಿಕಾ ಸಾಮರ್ಥ್ಯದ ಮಕ್ಕಳಿಗೆ ವರದಾನ, ಕಲಿಕೆಯ ಕಡಿಮೆ ಕಲಿಕಾ ಸಾಮರ್ಥ್ಯದ ಮಕ್ಕಳಿಗೆ ಒತ್ತಡವನ್ನು ಹೊಸ ಪದ್ಧತಿ ಕಡಿಮೆಮಾಡುತ್ತದೆ. ಈ ಪದ್ಧತಿಯಲ್ಲಿ ಕಡಿಮೆ ಕಲಿಕಾ ಸಾಮರ್ಥ್ಯದ ಮಕ್ಕಳ ಸುಧಾರಣೆಗೆ ಏನಾದರೂ ಅವಕಾಶ ಇರಬೇಕು.

**ಭೂಪಿ ಗುಸಾಯ್** (ಉಪಶಿಕ್ಷಕ, GPS, ಬಲ್ಲಾ, ಉತ್ತರಕಾಶಿ, ಉತ್ತರಾಖಂಡ್): ಒಂದೇ ವಿಷಯದ ಪರೀಕ್ಷಾರ್ಥಿಗಳ ನಡುವೆ ಮತ್ತು ಪರೀಕ್ಷಾರ್ಥಿಗಳ ನಡುವೆಯೇ ಗ್ರೇಡಿಂಗ್ ಸಾಧ್ಯವಾಗುವುದಾದರೆ.

**ಮಂಜು ರಾವತ್** (ಮುಖ್ಯೋಪಾಧ್ಯಾಯಿನಿ, GPS,, ದುಂಡಾಬಜಾರ್, ಉತ್ತರಕಾಶಿ): ಬೋರ್ಡ್ ಪರೀಕ್ಷೆಗಳಲ್ಲಿ ಬಂದ ಗ್ರೇಡ್‌ಪದ್ಧತಿಯ ಫಲಿತಾಂಶದ ಮೂಲಕ ಒಂದು ಶಾಲೆಯ ಬೋಧನಾ ಗುಣಮಟ್ಟವನ್ನೂ ತಿಳಿಯಬಹುದು. ಒಂದು ನಿರ್ದಿಷ್ಟ ವಿಷಯದಲ್ಲಿ ವಿದ್ಯಾರ್ಥಿಗಳು C ಅಥವಾ D ಗ್ರೇಡು ಪಡೆದಿದ್ದರೆ ನಿರ್ದಿಷ್ಟ ವಿಷಯದಲ್ಲಿ ವಿಷಯದ ಬೋಧನಾ ತಯಾರಿ ಬಹಳ ಕಳಪೆ ಎನ್ನಬಹುದು.

**ನರೇಶ್ ಲಾಲ್ ಶಾ** (ಪೋಷಕ, ಚುನ್ಯಾಲಿಸೌರ್, ಉತ್ತರಕಾಶಿ) ಅಶಕ್ತ ಮಕ್ಕಳಿಗೆ ಗ್ರೇಡ್‌ಪದ್ಧತಿಯು ವರದಾನ, ಆದರೆ ಬುದ್ಧಿವಂತರಿಗೆ ಅನುಕೂಲವಿಲ್ಲ ಯಾಕೆಂದರೆ ಗ್ರೇಡಿಂಗ್ ವಿಭಜನೆಯಲ್ಲೇ ತಪ್ಪಿದೆ.


***ಪರಾಮರ್ಶನ ಗ್ರಂಥಗಳು***

*Black P. and D. Wiliam (1998), "Assessment and Classroom Learning", Assessment in Education: Principles, Policy and Practice, CARFAX, Oxfordshire, Vol. 5, No. 1, pp. 7-74.*

*Bloom, B. et al. (1971), Handbook on Formative and Summative Evaluation of Student Learning, McGraw-Hill Book Co., New York.*

*Boulet, M.M. et al. (1990), "Formative Evaluation Effects on Learning Music", Journal of Educational Research, Vol. 84, pp. 119-125.*

*Bransford, J.D. et al. (eds.) (1999), How People Learn: Brain, Mind, Experience, and School, National Academy of Sciences, National Academy Press, Washington D.C.*

*Butler, D.L. and P.H. Winne (1995), "Feedback and Self-regulated Learning: A Theoretical Synthesis", Review of Educational Research, Vol. 65, No. 3, pp. 245-281.*

*Crooks, T.J. (1988), "The Impact of Classroom Evaluation Practices on Students", Review of Educational Research, 58, pp. 438-481.*





***ಅನಾನಾಸ್ ಕುಮಾರ್** ಅವರು ಅಜೀಂ ಪ್ರೇಂಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಉತ್ತರಕಾಶಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಅವರ ಸಂಪರ್ಕ ವಿಳಾಸ:* ananas.kumar@azimpremjifoundation.org


# ಭೂಗೋಳದಲ್ಲಿ ಕಲಿಕಾನಿರ್ಧರಣೆಯ ಸಾಧನಗಳನ್ನು ತಯಾರಿಸಲು ಕೆಲವು ಹೊಳಹುಗಳು




**ತಪಸ್ಯಾ ಸಹಾ**


ಭೂಗೋಳದಲ್ಲಿನ ಪರಿಕಲ್ಪನೆಗಳಲ್ಲಿ ವಿದ್ಯಾರ್ಥಿಗಳಿಗಿರುವ ಕೌಶಲಗಳು ಮತ್ತು ತಿಳುವಳಿಕೆಯನ್ನು ಅಳೆಯಲು ಭೂಗೋಳದ ಶಿಕ್ಷಕರಾಗಿ ಅನೇಕ ಪ್ರೇರಕಗಳನ್ನು ಉಪಯೋಗಿಸಬಹುದು. ನಿರೀಕ್ಷಣಾ ಶಕ್ತಿ, ಗುರುತಿಸುವಿಕೆ, ಹವಾಮಾನ ಮತ್ತು ಋತುಮಾನಗಳನ್ನು ಅರ್ಥಮಾಡಿಕೊಳ್ಳುವುದು, ನಕ್ಷೆಗಳ ತಯಾರಿಕೆ, ಚಿಹ್ನೆಗಳ ರಚನೆ, ನಕ್ಷಾ ಸೂಚಕಗಳು ಹಾಗೂ ನಕ್ಷಾ ತೋರುಗಡ್ಡಿಗಳನ್ನು ರಚಿಸುವ ಪರಿಕಲ್ಪನೆಗಳನ್ನು ಈ ಕೆಳಗಿನ ಕೆಲವು ಸಾಧನಗಳಿಂದ ಅಳೆಯಬಹುದು.




**ಪ್ರಶ್ನೆ1.** ಇಲ್ಲಿ ನೀಡಿರುವ ದಿನಪತ್ರಿಕೆಯ ತುಣುಕು, ಬ್ರೂಕ್ ವೂಡ್ಸ್ ಕನ್‌ಸ್ಟ್ರಕ್ಷನ್ ಕಂಪನಿಯವರು ಹೊಸದಾಗಿ ನಿರ್ಮಿಸಿರುವ ವಿಶ್ವ ವಿದ್ಯಾನಿಲಯದ ಆವರಣವಿರುವ ಸ್ಥಳವನ್ನು ಸೂಚಿಸುತ್ತದೆ.

ಕೊಟ್ಟಿರುವ ರೇಖಾಂಕಿತ ನಕ್ಷೆಯನ್ನು ನೋಡಿ ನಕ್ಷೆಯನ್ನು ಓದಲು ನೆರವಾಗುವ ನಕ್ಷಾ ಸೂಚಕಗಳನ್ನು ರಚಿಸಿ.

ನಕ್ಷಾ ಸೂಚಕಗಳು ಈ ಕೆಳಗಿನ ಚಿಹ್ನೆಗಳನ್ನು ಒಳಗೊಂಡಿರಬೇಕು: ಮೇಲ್ಸೇತುವೆ, ಜಲಾಶಯಗಳು, ನಿವೇಶನವಿರುವ ಸ್ಥಳ, ಮಾರುಕಟ್ಟೆ ಮತ್ತು ಶಾಲೆ.

**ಪ್ರಶ್ನೆ2.** ಮೇಲೆ ಕೊಟ್ಟಿರುವ ಹವಾಮಾನದ ವರದಿಯನ್ನು ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

ಎ) ಜಲಧಾರೆಯು ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ? ಅದು ಹರಿಯುವ ಪ್ರಮುಖ ನಗರಗಳನ್ನು ಹೆಸರಿಸಿ.

ಬಿ) ಮುಂಗಾರು ಮಳೆಯಾಗುವ ಸ್ಥಳಗಳನ್ನು ಹೆಸರಿಸಿ

ಸಿ) ಗುಡುಗು ಸಹಿತ ಮಳೆಯಾಗುವ ವಲಯ ಯಾವುದು?

ಡಿ) ಒಂದು ದಿನದಲ್ಲಿನ ಸಾಮಾನ್ಯವಾದ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶವೇನು?

ಇ) ಈ ವಲಯವು ದಿನದಲ್ಲಿ ಎಷ್ಟು ತಾಸು ಸೂರ್ಯನ ಬೆಳಕನ್ನು ಕಾಣುವುದು? ಕಾರಣ ನೀಡಿ.

ಎಫ್) ಸರೋವರದ ವಲಯ ಮತ್ತು ಲಾಸ್ ವೇಗಾಸ್ ವಲಯಗಳಲ್ಲಿ ಅಧಿಕ ಒತ್ತಡವಿದ್ದರೂ ಪಶ್ಚಿಮದ ಕರಾವಳಿ ವಲಯದಲ್ಲಿ ಕನಿಷ್ಠ ಒತ್ತಡವಿರಲು ಕಾರಣವೇನು?




A



B



C



**ಪ್ರಶ್ನೆ3.** ಭಾರತದಲ್ಲಿನ ಮೋಡ ಮುಸುಕಿರುವ ಈ ಮೂರು ನಕ್ಷೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಎ) ಬೇಸಿಗೆ ಕಾಲವನ್ನು ಸೂಚಿಸುತ್ತಿರುವ ನಕ್ಷೆ ಯಾವುದು?

ಬಿ) ಯಾವುದು ಮುಂಗಾರು ಮಳೆಗಾಲವನ್ನು ಸೂಚಿಸುತ್ತಿದೆ?